ತೆರೆದುಕೊಳ್ಳುವ ದೊಡ್ಡಮ್ಮನ ಮನೆಯೊಳಕ್ಕೆ ಓಡಿದಳು. ಬೆಳಕಿನಿಂದ ಕತ್ತಲೆಗೆ ಬಂದಿದ್ದರಿಂದ ಏನೂ ಕಾಣದಂತಾಗಿ ಕ್ಷಣಹೊತ್ತು ತಡಕಾಡಿದಳಾದರೂ, ಮತ್ತೊಂದು ಕೋಣೆ ದಾಟಿ ದೊಡ್ಡಪ್ಪ ಪೂಜೆ ಮಾಡುತ್ತಿದ್ದ ದೇವರ ಕೋಣೆಯನ್ನು ಪ್ರವೇಶಿಸಿದಳು. ದೊಡ್ಡಪ್ಪ ಮಡಿಯುಟ್ಟು ದೇವರ ಮುಂದೆ ಕುಳಿತು ರಾಗಬದ್ಧವಾಗಿ ಮಂತ್ರ ಹೇಳುತ್ತ, ಒಂದೊಂದೇ ದೇವರನ್ನು ಮಣೆಯ ಮೇಲಿಟ್ಟು ತೊಳೆಯುತ್ತಿದ್ದರು. ನೀಲಿ ದೇವರ ಕೋಣೆ ದಾಟಿ ಅಡುಗೆ ಮನೆಗೆ ಬಂದಾಗ ಅಲ್ಲಿ ಕಂಡ ದೃಶ್ಯದಿಂದ ಸ್ತಂಭೀಭೂತಳಾಗಿ ನಿಂತುಬಿಟ್ಟಳು. ದೊಡ್ಡಮ್ಮ ಪೂರ್ತಿ ಬೆತ್ತಲೆಯಾಗಿ ಕುಳಿತು ಅನ್ನ ಬಗ್ಗಿಸುತ್ತಿದ್ದಳು. ಗೆಜ್ಜೆಯ ಶಬ್ದದಿಂದ ಇವಳು ಬಂದುದು ಗೊತ್ತಾಗಿ ನಗುತ್ತಾ, “ಅಯ್ಯೋ ಕೂಸೆ, ಹೆದರಿಬಿಟ್ಯೇನೆ? ನಿನ್ನ ದೊಡ್ಡಪ್ಪ ಆಗ್ಲೇ ಮಡಿಯಲ್ಲಿ ಅನ್ನಕ್ಕಿಟ್ಟು ಹೋಗಿದ್ರು. ಇನ್ನೇನು ಬೆಂದು ಬಾಗಿಸುವ ಹೊತ್ತಾಗಿತ್ತು. ಅನ್ನ ಬಗ್ಗಿಸಲು ಎಂದು ಯಾರು ಮಡಿಸೀರೆ ಉಡ್ತಾರೆ ಅಂತ ಹಾಗೆ ಸೀರೆ ಬಿಚ್ಚಿಟ್ಟು ಬಗ್ಗಿಸ್ತಾ ಇದ್ದೆ. ಹುಟ್ಟು ಮಡಿ ಇದು, ಸರ್ವಶ್ರೇಷ್ಠ. ಬಾ, ಬಾ, ಹೆದರಬೇಡ” ಎಂದವರೇ ಅನ್ನ ಎತ್ತಿಟ್ಟು ಅಲ್ಲೇ ಸುರುಳಿಯಾಗಿ ಬಿದ್ದಿದ್ದ ಸೀರೆಯನ್ನು ಮೈಗೆ ಸುತ್ತತೊಡಗಿದಳು.

ನೀಲಿ ಸಾವರಿಸಿಕೊಳ್ಳುತ್ತಾ ತೊದಲು ಧ್ವನಿಯಲ್ಲಿ, “ಕಿಟ್ಟಣ್ಣ... ಸರುಅತ್ತೆ... ಕೊಳ್ಳಿ... ಬೆನ್ನ ಮೇಲೆ ಬರೆ...” ಎಂದು ತಡವರಿಸಿದಳು. ದೊಡ್ಡಮ್ಮನಿಗೆ ವಿಷಯ ಅರ್ಥವಾಗದಿದ್ದರೂ... ಏನೋ ಅನಾಹುತವಾಗಿದೆಯೆಂಬುದು ತಿಳಿದು, ರವಿಕೆಯನ್ನು ಹಾಕಲೂ ಪುರುಸೊತ್ತಿಲ್ಲದವಳಂತೆ ಸೀರಯನ್ನೇ ಮೈತುಂಬ ಹೊದ್ದು, ಹೊರಗೋಡಿಬಂದಳು. ಬೆನ್ನಿನ ಮೇಲಿನ ಸುಟ್ಟ ಗಾಯದ ಗುರುತು ಕಥೆ ಹೇಳಿದ್ದರಿಂದ ಬಿದ್ದು ಹೊರಳಾಡುತ್ತಿರುವ ಮಗನೆಡೆಗೆ ನೋಡಿ, “ಇರು ಮಗಾ ಬಂದೆ” ಎಂದವರೇ ಸರುಅತ್ತೆಯ ಮನೆಯ ಒಳಗಡೆ ಓಡಿದಳು. “ಎಲಾ ಬೀದಿ ಸೂಳೆ, ನನ್ನ ಮಗನಿಗೆ ಬರೆ ಹಾಕ್ತೀಯೇನೆ? ಇವತ್ತು ನಿಂಗೆ ಹಿಡಿಸೂಡಿ ಪೂಜೆ ಮಾಡಲಿಲ್ಲ ಅಂದ್ರೆ ನನ್ನ ಹೆಸರು ತೆಗೆ ಮತ್ತೆ” ಎಂದವಳೇ ಅಲ್ಲೇ ಒಳಕೋಣೆಯ ಮೂಲೆಯಲ್ಲಿರುವ ಹಿಡಿಸೂಡಿ ತೆಗೆದು ಹಿಗ್ಗಾ ಮುಗ್ಗಾ ಬಾರಿಸತೊಡಗಿದಳು. ತಾನೇನು ಕಡಿಮೆಯೆಂಬಂತೆ ಸರುಅತ್ತೆ, “ನಿನ್ನ ಮಗನ ನಾಲಿಗೆ ಮೊದಲು ಸರಿಮಾಡು. ಹೋಗಿ ಹೋಗಿ ನಿಂಗೆ ಹೇಳ್ತೀನಲ್ಲ. ನಾಯಿಯಂತೆ ಬಾಲ, ತಾಯಿಯಂತೆ ಮಗ. ನಿನ್ನ ಹಚ್ಚಂಬ್ಲಿ ಬುದ್ಧಿ ಮಕ್ಕಳಿಗೆ ಬರದೇ ಹೋದೀತಾ? ನಿನಗಿವತ್ತು ಮೆಟ್ಟಿನ ಪೂಜೆ ಮಾಡಿಯೇ ಸಿದ್ಧ ನೋಡು” ಎಂದವಳೇ ಹಳೆ ಚಪ್ಪಲಿ ಹುಡುಕಲು ಹೊರಗೋಡಿ ಬಂದಳು.

ನೀಲಿಗೆ ಅಲ್ಲಿ ನಿಲ್ಲಲಾಗಲಿಲ್ಲ. ಸೀದಾ ದೊಡ್ಡಪ್ಪ ಪೂಜೆ ಮಾಡುತ್ತಿದ್ದಲ್ಲಿಗೆ ಹೋಗಿ, “ದೊಡ್ಡಪ್ಪ, ದೊಡ್ಡಮ್ಮ ಸರುಅತ್ತೆ ಅಲ್ಲಿ ಜಗಳ ಮಾಡ್ತಿದ್ದಾರೆ. ಕಿಟ್ಟಣ್ಣನ ಬೆನ್ನಿಗೆ ಬರೆ ಹಾಕಿದ್ದಾರೆ” ಎಂದು ಅಳುತ್ತಾ ಹೇಳಿದಳು. ದೊಡ್ಡಪ್ಪ ಲಗುಬಗೆಯಿಂದ ಆಪೋಷನ ತೆಗೆದುಕೊಂಡವರೆ, “ಬಂದೆ ಇರು” ಎನ್ನುತ್ತಾ ಹೊರಗೋಡಿ ಬಂದರು. ಸರುಅತ್ತೆಯ ಚಪ್ಪಲಿ ಕಸಿದೊಗೆದು “ಎಂಥದಿದು ಹೆಂಗಸರ ಉಸಾಬರಿ? ಸುಮ್ನೆ ಇರಬಾರದಾ?’’ ಎಂದು ಅಬ್ಬರಿಸಿದರು. ಸರುಅತ್ತೆ ಸುಮ್ಮನಾಗದೆ, “ಅದನ್ನ ನೀನು ಕಟ್ಕೊಂಡಿರೋ ಹೆಂಡ್ತಿಗೇಳೂ. ಬಂದೇಬಿಟ್ಟ ಯಜಮಾನ, ನನಗೆ ಬುದ್ಧಿ ಹೇಳೋದಿಕ್ಕೆ. ಅವಳು ನನಗೆ ಹಿಡಿಸೂಡೀಲಿ ಹೊಡೀಬಹುದು, ನಾನವಳಿಗೆ ಹೊಡೀಬಾರದಾ? ಹೇಗೂ ಗೋಕರ್ಣಕ್ಕೆ ಶುದ್ಧೀಗೆ ಹೋಪುದು ಹೋಪದೆ. ಗನಾ ಮೈಲಿಗೆ ಮಾಡ್ಕಂಡೇ ಹೋಗ್ವೊ.” ಎನ್ನುತ್ತಿರುವಂತೆ ಅಲ್ಲಿಗೆ ಬಂದ ದೊಡ್ಡಮ್ಮ, “ನೋಡಿ ಇಲ್ಲಿ, ಓದುತ್ತಿದ್ದ ಮಾಣಿಗೆ ಬರೆಹಾಕೀರೋದನ್ನ. ಇವಳೇನು ಮನುಷ್ಯಳಾ...’’ ಎಂದು ತನ್ನ ಅಹವಾಲು ಮಂಡಿಸಿದಳು. ದೊಡ್ಡಪ್ಪ ಯಾರ ಮಾತನ್ನು ಕೇಳದೇ, “ಇಬ್ಬರೂ ಈಗ ಬಾಯ್ ಮುಚ್ಚುತ್ತೀರೋ ಇಲ್ಲ ಬಾಯ್ಗತ್ತಿ ತರಲೋ? ಒಬ್ಬೊಬ್ಬರನ್ನು ಕೊಚ್ಚಿಹಾಕ್ತೇನೆ ನೋಡಿ” ಎಂದು ಕಣ್ಣು ಕೆಂಪು ಮಾಡಿ ಗದರಿಸಿದಾಗ ಇಬ್ಬರೂ ಸುರು ಸುರು ಮಾಡುತ್ತಾ ಒಳಗೆ ಹೋದರು. ದೊಡ್ಡಪ್ಪ ಏರು ಧ್ವನಿಯಲ್ಲಿ, “ಲೇ, ಕೇಳಿಲ್ಲಿ, ಗಾಯ ದೊಡ್ಡದಿದೆ. ನೀನು ಒಲೆಮೇಲೆ ಎಣ್ಣೆ